ಅದಿತಿಯಿಂದ. ಇವರ ಪ್ರತಿಭೆಗೆ ಮಾನದಂಡವಾದ ಮತ್ತೂ ಒಂದು ಸಿನಿಮಾ 'ಕೆಜಿಎಫ್ 2'. 'ಕೆಜಿಎಫ್ 2'ನಲ್ಲಿ ಅಬ್ಬರಿಸಿದ 'ಮಾನ್ಸ್ಟರ್' ಹಾಡಿಗೆ ಕಂಠ ಮಾತ್ರವಲ್ಲ, ಬರವಣಿಗೆ ಕೂಡ ಅದಿತಿ ಅವರದ್ದೇ.

ಶಾಸ್ತ್ರೀಯವಾಗಿ ಸಂಗೀತ ಕಲಿತಿರದ ಅದಿತಿ, 9ನೇ ತರಗತಿಯಲ್ಲಿದ್ದಾಗ ಹಾಡಿದ್ದ 'ಆಚಾರವಿಲ್ಲದ ನಾಲಗೆ' ಹಾಡಿಗೆ ಯೂಟ್ಯೂಬ್‌ನಲ್ಲಿ ಪ್ರಶಂಸೆಯ ಸುರಿಮಳೆಯೇ ಹರಿದುಬಂದಿತ್ತು. ಹಾಡುತ್ತಾ ಹಾಡುತ್ತಾ ಭಿನ್ನ ಸಂಗೀತ ಪ್ರಕಾರಗಳಲ್ಲಿ ಕೈಯಾಡಿಸಿದರು. ಒಂದರ ನಂತರ ಒಂದರಂತೆ ಸಿಕ್ಕ ಅವಕಾಶಗಳು ಅವರ ಪ್ರಯೋಗದ ಹಾದಿಯನ್ನು ವಿಸ್ತಾರಗೊಳಿಸಿದ್ದವು. ಸಂಗೀತ ನಿರ್ದೇಶಕರ ಜೊತೆ ಕೆಲಸ ಮಾಡಿದ್ದು, ಅನುಭವಗಳ ಮೌಲ್ಯ ಹೆಚ್ಚಿಸಿತ್ತು.

ಅಮ್ಮ, ತಾತನ ಸಂಗೀತಾಭಿರುಚಿ, ಅಪ್ಪನ ರಂಗಗೀತೆಯ ತರಬೇತಿ ಅದಿತಿಗೆ ಮುಕ್ತಕಂಠವನ್ನು ವರವಾಗಿಸಿತ್ತು. 'ಇವರೆಲ್ಲರ ಅಂತಃಶಕ್ತಿಯೇ ನನ್ನಲ್ಲಿ ಸಂಗೀತವಾಗಿ ಹರಿದುಬಂದಿದೆ ಎನಿಸುತ್ತದೆ' ಎನ್ನುವ ಅವರು, ಕಳೆದ ಎರಡು ವರ್ಷಗಳಿಂದ ಹಿಂದೂಸ್ತಾನಿ ಸಂಗೀತಾಭ್ಯಾಸ ಮಾಡುತ್ತಿದ್ದಾರೆ.

ಕಲಾಪ್ರೇಮಿ ಅದಿತಿಗೆ ಶಿಕ್ಷಣ ವ್ಯವಸ್ಥೆಯ ಕಟ್ಟುಪಾಡುಗಳು ಮಿತಿ ಎನಿಸಿವೆ. 'ನಮ್ಮ ಮನೆಯಲ್ಲಿ ನನ್ನನ್ನು ಏನು ಬೇಕಾದರೂ ಮಾಡು ಎಂದುಬಿಟ್ಟಿದ್ದರು. ಆದರೆ ಕಾಲೇಜಿಗೆ ಸೇರಿದಾಗ ಪೆಟ್ಟಿಗೆಯೊಳಗೆ ಹಾಕಿ ನೀನು ಇಷ್ಟರಲ್ಲೇ ಇರಬೇಕು, ಇದನ್ನೇ ಮಾಡಬೇಕೆಂಬ ನಿರ್ಬಂಧಗಳು ನನಗೆ ಮಿತಿ ಎನಿಸಿದವು. ಹೀಗಾಗಿ ಸಂಗೀತ ಹಾಗೂ ಕಲೆಗೆ ಹೆಚ್ಚಿನ ಸಮಯ ನೀಡಲು ನಿರ್ಧರಿಸಿ, ದೂರಶಿಕ್ಷಣದಲ್ಲಿ ಮನಶಾಸ್ತ್ರ, ಇಂಗ್ಲಿಷ್, ಕನ್ನಡ ಹಾಗೂ ಚಿತ್ರಕಲೆ ವ್ಯಾಸಂಗ ಮಾಡುತ್ತಿದ್ದೇನೆ' ಎನ್ನುತ್ತಾರೆ.

ಸಂಗೀತದ ಮೋಹ ಬೆಳೆಸಿಕೊಂಡಿರುವ ಅದಿತಿ ಅವರಿಗೆ ನಟನೆಯೆಡೆಗೂ ತುಡಿತ. ಅವರಿಗೆ ನಟನೆಯ ಮೊದಲ ಪಾಠ ಸಿಕ್ಕಿದ್ದು ಐದನೇ ತರಗತಿಯಲ್ಲಿ. ಅದು, 'ಸಂಚಾರಿ ಥಿಯೇಟರ್' ರಂಗತಂಡದ ಮೂಲಕ.

'ನಾನು ಮೂಲತಃ ನಾಚಿಕೆ ಸ್ವಭಾವದವಳು. ಮುಖ ಕೊಟ್ಟು ಮಾತನಾಡಲೂ ಅಂಜಿಕೆ. ಕಲೆಯ ವಿಷಯ ಬಂದರೆ ಅವೆಲ್ಲ ಮೂಲೆ ಸೇರುತ್ತವೆ. ಅಂಥ ಅಭಿವ್ಯಕ್ತಿಯನ್ನು ರಂಗಭೂಮಿ ಕಲಿಸಿಕೊಟ್ಟಿದೆ. ಯಾವುದೇ ಕಲೆಯಲ್ಲಿ ತೊಡಗಿಕೊಂಡರೆ, ನಮ್ಮಿಂದ ಸಾಧ್ಯವಾದದ್ದೆಲ್ಲವನ್ನೂ ನೀಡಬೇಕು. ನ್ಯಾಯ ಒದಗಿಸಬೇಕೆಂಬ ಮೂಲ ಪಾಠ ಕಲಿತಿದ್ದು ಅಲ್ಲಿಯೇ' ಎಂದು ಖುಷಿಯಿಂದ ಹೇಳಿಕೊಳ್ಳುತ್ತಾರೆ.

ರಂಗತಂಡದ ಹಲವು ನಾಟಕಗಳಲ್ಲಿ ಅಭಿನಯಿಸಿದ ಅವರ ಕಂಠಕ್ಕೆ ಗಟ್ಟಿತನ ತುಂಬಿದ್ದು ಅಲ್ಲಿ ಹಾಡಿಸುತ್ತಿದ್ದ ಜಾನಪದ ಗೀತೆ, ರಂಗಗೀತೆಗಳು. ಅಲ್ಲಿಂದ ಹಾಡುಗಳ ಪ್ರೀತಿ ಹತ್ತಿಸಿಕೊಂಡ ಅವರು, ತಮ್ಮ ಕಂಠವನ್ನು ಪ್ರತಿ ಹಾಡಿನಲ್ಲೂ ತಿದ್ದಿತೀಡಿದರು.

ತಮ್ಮ ಜೀವನದಲ್ಲಿ ಎಲ್ಲವೂ ಸರಳವಾಗಿ ರೂಪಾಂತರವಾಗುತ್ತಾ ಹೋಯಿತು ಎನ್ನುವ ಅವರಿಗೆ, 'ವೇದ' ಸಿನಿಮಾ, ನಟನಾ ಕಲೆಯ ಮೊದಲ ಮಜಲು ಎನಿಸಿದೆ.

'ವೇದ ಸಿನಿಮಾದ ಪಾತ್ರವೊಂದಕ್ಕೆ ನಿರ್ದೇಶಕ ಹರ್ಷ ಅವರು, ನನ್ನ ತಂದೆಯ ಫೋಟೊ ಹುಡುಕುತ್ತಿದ್ದಾಗ ನನ್ನ ಫೋಟೊ ಕಂಡರು. ಕನಕ ಪಾತ್ರಕ್ಕೆ ನಾನು ಸರಿಹೊಂದುತ್ತೇನೆಂದು ನನ್ನನ್ನು ಆರಿಸಿದರು. ಇದು ಆಕಸ್ಮಿಕವೋ



ಏನೋ ಗೊತ್ತಿಲ್ಲ. ಮೊದಲ ಸಿನಿಮಾ, ಅದೂ ಶಿವರಾಜ್ ಕುಮಾರ್ ಅವರಂಥ ದೊಡ್ಡ ನಟನ 125ನೇ ಸಿನಿಮಾದಲ್ಲಿ ನಟಿಸುವುದೆಂದರೆ ನನಗಾದ ಆತಂಕ ಹೇಳಿಕೊಳ್ಳಲು ಸಾಧ್ಯವೇ ಇಲ್ಲ' ಎಂದು ನಗುತ್ತಾರೆ.

ಕನಕಳನ್ನು ನಾನು ಮರೆಯುವುದೇ ಇಲ್ಲ ಎನ್ನುವ ಅವರು, 'ಪ್ರತಿ ಹೆಣ್ಣುಮಗಳ ಜೀವನದಲ್ಲಿ ಸಾಮಾನ್ಯವಾಗಿ ಇಂಥದ್ದೊಂದು ಸನ್ನಿವೇಶ ಎದುರಾಗಿರುತ್ತದೆ. ತುಂಬಾ ಹತ್ತಿರದವರಿಂದ, ರಸ್ತೆಯಲ್ಲಿ, ಅಲ್ಲಿ ಇಲ್ಲಿ ಯಾರಿಂದಲೋ ನಮ್ಮ ಬಗ್ಗೆ ಏನೇನೋ ಕಮೆಂಟ್ ಬರುತ್ತದೆ. ಬ್ಯಾಡ್ ಟಚ್ ಆಗಿರುತ್ತದೆ. ಶಾಲೆಯಲ್ಲಿ ಶಿಕ್ಷಕರಿಂದಲೇ ಲೈಂಗಿಕ ದೌರ್ಜನ್ಯವಾಗುತ್ತಿರುವ ಎಷ್ಟೊಂದು ಸುದ್ದಿಗಳು ಬರುತ್ತಿವೆ... ಆದರೆ ನಾವು ಅದರ ಬಗ್ಗೆ ಮಾತನಾಡುವುದಿಲ್ಲ, ಪ್ರತಿಕ್ರಿಯಿಸುವುದಿಲ್ಲ. ಈ ಸಿನಿಮಾ ಪ್ರತಿಕ್ರಿಯೆ ಬಗ್ಗೆ ಹೇಳುತ್ತದೆ. ಕನಕಳ ಕಿಚ್ಚು ಅಂಥದ್ದು' ಎಂದು ಭಾವುಕರಾಗುತ್ತಾರೆ.

ಅದಿತಿ ಮೊದಲ ಸಿನಿಮಾಗೆ ಅಪ್ಪನ ಸಲಹೆಗಳು ಜೊತೆಯಾಗಿವೆ. 'ಸಿನಿಮಾ ಕಥೆ ಹೇಳುವಾಗ ಅಪ್ಪ ಜೊತೆಗಿದ್ದರು. ಪಾತ್ರದೊಳಗೆ ಹೇಗೆ ಒಂದಾಗಬೇಕು ಎಂಬುದನ್ನು ಹೇಳುತ್ತಿದ್ದರು. ಒಂದು ಪಾತ್ರ ನೀನಾಗಲು ಶುರುವಾದರೆ, ನೀನು ಅದೇ ರೀತಿ ಯೋಚನೆ ಮಾಡಬೇಕು ಎನ್ನುತ್ತಿದ್ದರು. ಹಾಗೆಯೇ ಪ್ರಯತ್ನಿಸಿದೆ. ನಿರ್ದೇಶಕರು ಏನು ಹೇಳಿದ್ದಾರೋ ಅಷ್ಟನ್ನು ಮಾಡಲು ಪ್ರಯತ್ನಿಸಿದ್ದೇನೆ. ಪಾತ್ರದ ತಯಾರಿ ಒಂದೆಡೆಯಾದರೆ, ದೈಹಿಕ ಕಸರತ್ತು ನೀಡಿದವರು ಚೇತನ್ ಡಿಸೋಜಾ. ಆನ್ ಸೆಟ್‌ನಲ್ಲಿ ರವಿವರ್ಮ ಸರ್ ಇದ್ದರು. ನಟನೆಯಲ್ಲಿ ಪ್ರತಿ ಸಣ್ಣ, ಸೂಕ್ಷ್ಮ ಸಂಗತಿಯೂ ಎಷ್ಟು ಮುಖ್ಯ, ಅವು ಸಿನಿಮಾವನ್ನು ಬಿಂಬಿಸುವಲ್ಲಿ ಹೇಗೆ ಬದಲಾವಣೆ ತರಬಲ್ಲವು ಎಂಬುದನ್ನು ಗಮನಿಸಿದೆ' ಎನ್ನುತ್ತಾರೆ.

ತಮ್ಮ ವ್ಯಕ್ತಿತ್ವ ರೂಪಿಸುವಲ್ಲಿ ಅಪ್ಪ–ಅಮ್ಮ, ಸಹೋದರನ ಬಳುವಳಿ ಹೆಚ್ಚೇ ಇದೆ ಎನ್ನುವ ಅದಿತಿ, ನಟನೆ, ಹಾಡಿನ ಹೊರತಾಗಿ ಚಿತ್ರಕಲೆಯನ್ನು ನೆಚ್ಚಿಕೊಂಡಿದ್ದಾರೆ. 'ಕಲೆಯನ್ನು ಹವ್ಯಾಸ ಎನ್ನುವುದಕ್ಕಿಂತ ಅದು ನಮ್ಮ ಜೀವನಶೈಲಿಯೇ ಆಗಿದೆ. ದಿನಾ ಹಲ್ಲುಜ್ಜುವಂತೆ ಕಲೆಯೂ ಜೀವನದ ಭಾಗವೇ ಆಗಿದೆ. ಇದರ ಹೊರತಾಗಿ ಸಿನಿಮಾ ನೋಡುವುದು, ಜನರನ್ನು ಗಮನಿಸುವುದು ನನಗೆ ತುಂಬಾ ಇಷ್ಟ' ಎಂದು ಹೇಳುತ್ತಾರೆ.

ಅದಿತಿ ಹಾಡಿರುವ ಮತ್ತಷ್ಟು ಹಾಡುಗಳು ಬಿಡುಗಡೆ ಆಗಬೇಕಿವೆ. ಲೈವ್ ಶೋಗಳನ್ನು ಮಾಡುವ ಯೋಜನೆಯಿದ್ದು, ಆಲ್ಬಂ ಹೊರತರುವ ಪ್ರಯತ್ನದಲ್ಲಿದ್ದಾರೆ. ಇದೀಗ ನಟನೆಯೂ ಅವರ ಕನಸುಗಳ ಪೈಕಿ ಒಂದಾಗಿದೆ.

'ನನಗೆ ಒಳ್ಳೆಯ ನಿರ್ದೇಶಕರು, ಪ್ರತಿಭಾವಂತ ನಟರೊಂದಿಗೆ ಕೆಲಸ ಮಾಡುವ ಆಸೆಯಿದೆ. ಯಾವುದೇ ಒಳ್ಳೆ ಸಿನಿಮಾದ ಪ್ರಕ್ರಿಯೆಯ ಭಾಗವಾಗಬೇಕೆನ್ನುವ ಬಯಕೆ. ಬಗೆ ಬಗೆಯ ಪಾತ್ರಗಳಲ್ಲಿ ನನ್ನನ್ನು ನಾನು ನೋಡಬೇಕಿದೆ. ಒಂದು ಪಾತ್ರಕ್ಕಿಂತ ಮತ್ತೊಂದು ಪಾತ್ರ ಸಂಪೂರ್ಣ ಭಿನ್ನ, ಅನನ್ಯವಾಗಿರಬೇಕು. ಕನಕ ಒಂದು ರೀತಿಯ ಪಾತ್ರವಾದರೆ, ಮುಂದಿನ ಪಾತ್ರ ಕನಕಗಿಂತ ತುಂಬಾ ಭಿನ್ನವಾಗಿರಬೇಕು, ಅಂಥ ಪಾತ್ರ ವೈವಿಧ್ಯವಿರಬೇಕು. **I am open to exploring** ಎಂದು ನಿರೀಕ್ಷೆಗಳನ್ನು ಹಂಚಿಕೊಳ್ಳುತ್ತಾರೆ.